# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನಿಗಮ ಕಛೇರಿ:
ನಂ–29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು–5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821–2420850, ಫ್ಯಾಕ್ಸ್:0821–2434077
ಈ–ಮೇಲ್: seechnkodagu@cescmysore.org


ಸಂಖ್ಯೆ: ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ–127/2018–19/cys-76 ದಿನಾಂಕ: 27.06.2018

## ಸಭೆಯ ನಡಾವಳಿಗಳು

ದಿನಾಂಕ 12.06..2018ರಂದು ವಿರಾಜಪೇಟೆ ಉಪವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ನಡಾವಳಿಗಳು.

Dam Counal 30/6/2018

ಸಭೆಯಲ್ಲಿ ಹಾಜರಿದ್ದವರು:–

1. ಶ್ರೀ.ಪ್ರತಾಪ್ : ಅಧೀಕ್ಷಕ ಇಂಜಿನಿಯರ್ (ವಿ), ಮೈಸೂರು ವೃತ್ತ.
2. ಶ್ರೀಮತಿ ತಾರಾ ಎನ್. : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ವೃತ್ತ ಕಛೇರಿ, ಮೈಸೂರು
3. ಶ್ರೀಮತಿ ಲಿಂಗರಾಜಮ್ಮ : ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ವೃತ್ತ ಕಛೇರಿ, ಮೈಸೂರು
4. .ಶ್ರೀ.ಬಿ.ಸೋಮಶೇಖರ್ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಡಿಕೇರಿ ವಿಭಾಗ.
5. ಶ್ರೀ.ಪಿ.ಎಸ್.ಸುರೇಶ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿರಾಜಪೇಟೆ ಉಪವಿಭಾಗ.
6. ಶ್ರೀ.ಪಿ.ಎನ್.ದೇವಯ್ಯ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ತಾಂ), ಮಡಿಕೇರಿ ವಿಭಾಗ.
7. ಶ್ರೀ.ವಿ.ಎಂ.ನಾಗರಾಜು : ಲೆಕ್ಕಾಧಿಕಾರಿಗಳು, ಮಡಿಕೇರಿ ವಿಭಾಗೀಯ ಕಛೇರಿ
8. ಶ್ರೀಮತಿ ಅಲ್ಫೋನ್ಸೋ : ಲೆಕ್ಕಾಧಿಕಾರಿಗಳು (ಆಂ.ಲೆ.ಪ), ಮಡಿಕೇರಿ ವಿಭಾಗೀಯ ಕಛೇರಿ.
9. ಶ್ರೀ.ಕೆ.ಎಂ.ದಿಲೀಪ್ : ಸಹಾಯಕರು ಇಂಜಿನಿಯರ್(ತಾಂ), ವಿರಾಜಪೇಟೆ ಉಪವಿಭಾಗ.
10. ಶ್ರೀ.ಹರೀಶ್.ಎಂ.ಎಸ್ : ಹಿರಿಯ ಸಹಾಯಕರು, ಕಂದಾಯ ಶಾಖೆ, ವಿರಾಜಪೇಟೆ
11. ಶ್ರೀ. ಭರತ್ ಕುಮಾರ್ : ಮೆ: ಐಡಿಯಾ ಇನ್ಫಿನಿಟಿ ಐಟಿ ಸಲ್ಯುಸನ್, ಬೆಂಗಳೂರು

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿ ಅಧೀಕ್ಷಕ ಇಂಜಿನಿಯರ್ (ವಿ) ರವರಾದ ಶ್ರೀ.ಎಂ.ಪ್ರತಾಪ್ ರವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸಿಕೊಂಡರು. ದಿನಾಂಕ:14.11.2017 ರಂದು ನಡೆದ ಸಭೆಯ ನಡಾವಳಿಗಳ ಬಗ್ಗೆ ಹಾಗು ಸಾಧಿಸಿದ ಪ್ರಗತಿ ಬಗ್ಗೆ ಚರ್ಚಿಸಿ ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಕುಂದುಕೊರತೆಗಳನ್ನು ಆಲಿಸಿ ಈ ಕೆಳಕಂಡಂತೆ ಸಲಹೆ ಸೂಚನೆಗಳನ್ನು ನೀಡಿದರು.

| ಕ್ರಮ ಸಂಖ್ಯೆ | ಸಲಹೆ/ದೂರುಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಸಲಹೆ/ ದೂರುಗಳಿಗೆ ಉತ್ತರ |
|---|---|---|---|
| 1 | ಶ್ರೀ.ಸಿ.ಸಿ.ಬೆಳ್ಳಿಯಪ್ಪ, ಮಗ್ಗುಲ ಗ್ರಾಮ ದೂ. | * ಸದರೀ ಗ್ರಾಹಕರ ನಿವಾಸದ ಎದುರು ಬೆಳೆದಿರುವ ಮರಗಿಡಗಳನ್ನು ಕಟಾವು ಮಾಡಿ ವಿದ್ಯುತ್ ಸಂಪರ್ಕ ಒದಗಿಸುವಂತೆ ಕೋರಿ ಲಿಖಿತ ಪ್ರತಿ ನೀಡಿರುತ್ತಾರೆ. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡುತ್ತ ಕೂಡಲೇ ಸ್ಥಳ ಪರಿಶೀಲನೆ ಮಾಡಿ ವರದಿ ನೀಡುವಂತೆ ಸೂಚಿಸಿದರು. |

ಚಾ.ವಿ.ಸ.ನಿ.ನಿ. ನಿಗಮ ಕಾರ್ಯಾಲಯ, ಮೈಸೂರು ನಂ. 1253 ದಿ. 30/6/18

Scanned by CamScanner

| | | | |
|---|---|---|---|
| 2 | ಶ್ರೀ.ತಿಮ್ಮಯ್ಯ ಎಂ.ಎಸ್.ಪಾಲಂಗಾಲ ಗ್ರಾಮ ಕಡಂಗ ಅಂಚೆ. ದೂ.8861298612 966575501 | * ಪಾಲಂಗಾಲ ಗ್ರಾಮದಲ್ಲಿ ವೋಲ್ಟೇಜ್ ಸಮಸ್ಯೆಯಿದ್ದು ಹೊಸ ಪರಿವರ್ತಕ ಅಳವಡಿಸುವಂತೆ ಮೌಖಿಕವಾಗಿ ಹಾಗೂ ಲಿಖಿತ ರೂಪದಲ್ಲಿ ಕೋರಿರುತ್ತಾರೆ. | * ಇದಕ್ಕೆ ಉತ್ತರಿಸಿದ ಸಹಾಯ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡುತ್ತಾ ದೀನ್ ದಯಾಳು ಉಪಾಧ್ಯಾಯ ಗ್ರಾಮ ವಿದ್ಯುತ್ ಯೋಜನೆಯಡಿಯಲ್ಲಿ ಹೆಚ್ಚುವರಿ ಪರಿವರ್ತಕವು ಮಂಜೂರುಗೊಂಡಿದ್ದು ಸದರೀ ಗ್ರಾಮದಲ್ಲಿ ಈ ಯೋಜನೆಯಡಿಯಲ್ಲಿ ಪರಿವರ್ತವನ್ನು ಅಳವಡಿಸುವುದಾಗಿ ತಿಳಿಸಿದರು. |
| 3 | ಉಮ್ಮರ್, ಜಮೀಲ್, ಜಲೀಲ್, ಕೊಟ್ಟೋಳಿ ಗುಂಡಿಗೆರೆ ದೂ.9686413723 | * ಕೊಟ್ಟೋಳಿ ಗುಂಡಿಗೆರೆ ಗ್ರಾಮದಲ್ಲಿ ವೋಲ್ಟೇಜ್ ಸಮಸ್ಯೆಯಿದ್ದು ಹೊಸ ಪರಿವರ್ತಕ ಅಳವಡಿಸುವಂತೆ ಮೌಖಿಕವಾಗಿ ಹಾಗೂ ಲಿಖಿತ ರೂಪದಲ್ಲಿ ಕೋರಿರುತ್ತಾರೆ. | * ಇದಕ್ಕೆ ಉತ್ತರಿಸಿದ ಸಹಾಯ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡುತ್ತಾ ದೀನ್ ದಯಾಳು ಉಪಾಧ್ಯಾಯ ಗ್ರಾಮ ವಿದ್ಯುತ್ ಯೋಜನೆಯಡಿಯಲ್ಲಿ ಹೆಚ್ಚುವರಿ ಪರಿವರ್ತಕವು ಮಂಜೂರುಗೊಂಡಿದ್ದು ಸದರೀ ಗ್ರಾಮದಲ್ಲಿ ಈ ಯೋಜನೆಯಡಿಯಲ್ಲಿ ಪರಿವರ್ತವನ್ನು ಅಳವಡಿಸುವುದಾಗಿ ತಿಳಿಸಿದರು. |
| 4 | ಬೆಳ್ಳಿಯಪ್ಪ ಕಣ್ಣಂಗಾಲ ಗ್ರಾಮ ದೂ:9482133994 | * ಕಣ್ಣಂಗಾಲ ಗ್ರಾಮದಲ್ಲಿ ವೋಲ್ಟೇಜ್ ಸಮಸ್ಯೆಯಿದ್ದು ಹೊಸ ಪರಿವರ್ತಕ ಅಳವಡಿಸುವಂತೆ ಮೌಖಿಕವಾಗಿ ಹಾಗೂ ಲಿಖಿತ ರೂಪದಲ್ಲಿ ಕೋರಿರುತ್ತಾರೆ. | * ಇದಕ್ಕೆ ಉತ್ತರಿಸಿದ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಸಂಭಂಧಿಸಿದ ಶಾಖಾಧಿಕಾರಿಗೆ ಸ್ಥಳ ಪರಿಶೀಲಿಸುವಂತೆ ಸೂಚಿಸಿದರು ಮುಂದುವರೆದು ಸಹಾಯ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರು ದೀನ್ ದಯಾಳ್ ಉಪಧ್ಯಾಯ ಗ್ರಾಮ ವಿದ್ಯುತ್ ಯೋಜನೆಯಡಿಯಲ್ಲಿ ಒಳಗೊಂಡಿದ್ದು ಸದರೀ ಕಾಮಗಾರಿಯನ್ನು ಅತಿ ಶೀಘ್ರದಲ್ಲಿ ಪ್ರತ್ಯೇಕ ಪರಿವರ್ತಕ ಅಳವಡಿಸಲಾಗುವುದು ಎಂದು ತಿಳಿಸಿದರು. |
| 5 | ಪ್ರಿನ್ಸ್ ಮೊಣ್ಣಪ್ಪ, ಕೊಟ್ಟೋಳಿ ಗ್ರಾಮ ದೂ:9980101536 | * ಸದರೀಯವರು ಕೊಟ್ಟೋಳಿ ಗ್ರಾಮ ವ್ಯಾಪ್ತಿಯಲ್ಲಿ ವಿದ್ಯುತ್ ಅಡಚಣೆ ತೀವ್ರವಾಗಿರುವ ಬಗ್ಗೆ ದೂರಿರುತ್ತಾರೆ.<br><br>* ರಾತ್ರಿ ಪಾಳಿಯಲ್ಲಿ ದೂರು ದಾಖಾಲಿಸುವ | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ವಿದ್ಯುತ್ ಅಡಚಣೆ ಯಾವ ಕಾರಣಕ್ಕೆ ಆಗುತ್ತವೆ ಎಂಬುದನ್ನು ವಿವರಿಸುತ್ತ ಸ.ಕಾ.ನಿ.ಇಂಜಿನಿಯರ್(ವಿ) ರ ವರಿಗೆ ವಿದ್ಯುತ್ ಅಡಚಣೆಯನ್ನು ನಿಭಾಯಿಸಲು ತೆಗೆದುಕೊಂಡ ಕ್ರಮದ ಬಗ್ಗೆ ವಿಚಾರಿಸಿದರು. ಸ.ಕಾನಿ.ಇಂ(ವಿ) ಮಾತನಾಡುತ್ತ ಸದರೀ ಗ್ರಾಮಕ್ಕೆ 66/33/11 ಕೆವಿ ವಿರಾಜಪೇಟೆ ಎಂಯುಎಸ್‌ಎಸ್ ನಿಂದ 11 ಕೆ.ವಿ ಎಫ್–4 ಬೇತ್ರಿ ಫೀಡರ್ ಮುಖಾಂತರ ಬೇತ್ರಿ ಹಾಗು ಪಾಲಂಗಾಲ ಕಡೆಗಳಿಗೆ ವಿದ್ಯುತ್ ಸರಬರಾಜಾಗುತ್ತಿದ್ದು ವಿದ್ಯುತ್ ಮಾರ್ಗದ ವ್ಯಾಪ್ತಿ ಹೆಚ್ಚಾಗಿರುವುದರಿಂದ ವಿದ್ಯುತ್ ಅಡಚಣೆ ಅಧಿಕವಾಗಿದ್ದು, ಬೇತ್ರಿ ಹಾಗು ಪಾಲಂಗಾಲ ಮಾರ್ಗಗಳನ್ನು ಬೇರ್ಪಡಿಸಲು ಐಪಿಡಿಎಸ್ ಯೋಜನೆಯಡಿ ಮಾರ್ಗದ ವಿಸ್ತರಣೆ ಕಾಮಗಾರಿ ಪೂರ್ಣಗೊಂಡಿರುತ್ತದೆ. ಡಿಡಿಯುಜಿಜೆವೈ ಯೋಜನೆಯಡಿ ಪ್ರತ್ಯೇಕ ಸರ್ಕ್ಯೂಟ್ ಬ್ರೇಕರ್ ಅಳವಡಿಸಲು ಅವಕಾಶವಿದ್ದು ಕೂಡಲೇ ಕಾಮಗಾರಿ ಕೈಗೆತ್ತಿಕೊಳ್ಳುವಂತೆ ಸಂಭಂಧಪಟ್ಟ ಗುತ್ತಿಗೆದಾರರಿಗೆ ಅಗತ್ಯ ಸೂಚನೆ ನೀಡಲಾಗಿದೆಯೆಂದು ತಿಳಿಸಿದರು<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು |

Scanned by CamScanner

| | | | |
|---|---|---|---|
| | | ಸಲುವಾಗಿ ಕರೆ ಮಾಡಿದಾಗ ಸ್ವೀಕರಿಸದೇ ಇರುವ ಬಗ್ಗೆ ಹಾಗೂ ಗ್ರಾಹಕ ದೂರನ್ನು ಸೂಕ್ತ ರೀತಿಯಲ್ಲಿ ನಿಭಾಯಿಸದಿರುವ ಬಗ್ಗೆ ದೂರಿರುತ್ತಾರೆ.<br><br>* ಕೊಟ್ಟೋಳಿ ಗ್ರಾಮಕ್ಕೆ ಸರಿಯಾದ ಸಮಯದಲ್ಲಿ ವಿದ್ಯುತ್ ಬಿಲ್ ಒದಗಿಸದೇ ಇರುವ ಬಗ್ಗೆ ದೂರಿರುತ್ತಾರೆ. | ಮಾತನಾಡುತ್ತ ಗ್ರಾಹಕರ ದೂರನ್ನು ಸೂಕ್ತ ರೀತಿಯಲ್ಲಿ ದಾಖಲಿಸಿಕೊಂಡು ದಾಖಲಾದ ದೂರನ್ನು ನಿರ್ವಹಿಸಿದ ಬಗ್ಗೆ ನೋಡಿಕೊಳ್ಳುವಂತೆ ಸ.ಕಾ.ನಿ.ಇಂ(ವಿ) ರವರಿಗೆ ಸೂಚಿಸಿದರು. ಮುಂದುವರಿದು ಸ.ಕಾ.ನಿ.ಇಂ(ವಿ) ವಿರಾಜಪೇಟೆರವರು ಉತ್ತರಿಸುತ್ತಾ ಹಾಲಿಯಿರುವ ನಿರ್ವಹಣಾ ಸಿಬ್ಬಂಧಿಗಳೇ ದೂರುಗಳನ್ನು ಸ್ವೀಕರಿಸುತ್ತಿದ್ದು, ಮಳೆಗಾಲದ ಅಧಿಕ ಕೆಲಸದ ಒತ್ತಡದಿಂದ ಸರಿಯಾದ ರೀತಿಯಲ್ಲಿ ನಿಭಾಯಿಸುವುದು ಕಷ್ಟಸಾಧ್ಯವಾಗಿದ್ದು, ಶಾಖೆಗೆ 24*7 ಸರ್ವೀಸ್ ಸ್ಟೇಷನ್ ಸೌಲಭ್ಯವನ್ನು ಮಂಜೂರು ಮಾಡಿಸಿಕೊಡುವಂತೆಯೂ ಹಾಗು ಅಧಿಕ ಸಿಬ್ಬಂಧಿಗಳನ್ನು ನೇಮಿಸಲು ಅಗತ್ಯ ಮಂಜೂರಾತಿ ನೀಡುವಂತೆ ಕೋರಿದರು. |
| 6 | ಬ್ರಿಗೇಡಿಯರ್:<br>ಪಿ.ಟಿ.ಪೊಣ್ಣಪ್ಪ<br>ಪಾಲಂಗಾಲ ಗ್ರಾಮ<br>ದೂ.9449029269 | * ಸದರೀ ಗ್ರಾಹಕರು ಐ.ಪಿ.ಡಿ.ಎಸ್ ಯೋಜನೆಯಡಿ ಪಾಲಂಗಾಲ ಗ್ರಾಮಕ್ಕೆ ಪ್ರತ್ಯೇಕ ಮಾರ್ಗ ರಚಿಸಿದ್ದು ಸದರೀ ಮಾರ್ಗಕ್ಕೆ ಬ್ರೇಕರ್ ನ್ನು ಶೀಘ್ರವಾಗಿ ಒದಗಿಸಿದಲ್ಲಿ ವಿದ್ಯುತ್ ಅಡಚಣೆಯು ಕಮ್ಮಿಯಾಗುವುದಾಗಿ ಮೌಖಿಕವಾಗಿ ಹಾಗೂ ಲಿಖಿತವಾಗಿ ತಿಳಿಸಿರುತ್ತಾರೆ ಮುಂದುರಿದು ಸಂಭಂಧಿಸಿದ ಮಾರ್ಗದಾಳುವವನ್ನು ಸಂಭಂಧಿತ ಗ್ರಾಮದಲ್ಲಿಯೇ ವಾಸ್ತವ್ಯ ಹೂಡುವಂತೆ ಹಾಗೂ ವಿದ್ಯುತ್ ಕಾಮಗಾರಿಯಲ್ಲಿ ಬಳಕೆಯಾಗುವ ಸಾಮಗ್ರಿಗಳ ಗುಣಮಟ್ಟವನ್ನು ಸುಧಾರಿಸುವಂತೆ ತಿಳಿಸಿರುತ್ತಾರೆ. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಬ್ರೇಕರನ್ನು ಕೆ.ಪಿ.ಟಿ.ಸಿಎಲ್ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು.<br><br>* ವಿದ್ಯುತ್ ಅಡಚಣೆಯು ಸಾಮಾಗ್ರಿಗಳ ಗುಣಮಟ್ಟವನ್ನು ಹೊರತು ಪಡಿಸಿ ಬೇರೆ ರೀತಿಯಲ್ಲಿ ಉಂಟಾಗುವ ಅಡಚಣೆಯ ಬಗ್ಗೆ ವಿವರಿಸುತ್ತ ಸದರೀ ಮಾರ್ಗವು ತುಂಬಾ ದೂರವಿದ್ದು ಮಳೆಗಾಲದಲ್ಲಿ ಉಂಟಾಗುವ ಅಡಚಣೆಯನ್ನು ನಿಗಧಿತ ಸಮಯದಲ್ಲಿ ನಿರ್ವಹಿಸಲು ತಾತ್ಕಾಲಿಕ ಗ್ಯಾಂಗ್‌ಮೆನ್ ನಿಯೋಜಿಸಿರುವುದಾಗಿಯೂ ಹಾಗು ವಾಹನ ಒದಗಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವುದಾಗಿಯೂ ತಿಳಿಸಿದರು ಮುಂದುವರಿದು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡುತ್ತಾ ಎಲ್ಲಾ ಶಾಖಾಧಿಕಾರಿಗಳು ಹಾಗೂ ನಿರ್ವಹಣಾ ಸಿಬ್ಬಂದಿಗಳು ಕಡ್ಡಾಯವಾಗಿ ಕೇಂದ್ರ ಸ್ಥಾನದಲ್ಲಿಯೇ ವಾಸ್ತವ್ಯ ಹೂಡಿ ತುರ್ತು ನಿರ್ವಹಣಾ ಕೆಲಸಗಳು ಹಾಗೂ ಗ್ರಾಹಕರ ದೂರುಗಳಿಗೆ ಸಕಾಲದಲ್ಲಿ ಸ್ಪಂದಿಸುವಂತೆ ಪತ್ರದ ಮೂಲಕ ಸೂಚಿಸಿರುವುದಾಗಿ ತಿಳಿಸಿದರು. |
| 7 | ನಂಜಪ್ಪ, ಬೇಟೋಳಿ ಗ್ರಾಮ<br>ದೂ.9483308333 | * ಬೇಟೋಳಿ ಹಾಗೂ ಪಾಲಂಗಾಲ ಗ್ರಾಮಗಳಿಗೆ ನಿಗಧಿತ ಸಮಯಕ್ಕೆ ವಿದ್ಯುತ್ ಬಿಲ್ ಒದಗಿಸದಿರುವ ಬಗ್ಗೆ ಮೌಖಿಕವಾಗಿ ತಿಳಿಸಿದರು.<br><br>* ಮಳೆಗಾಲದಲ್ಲಿ ವಿದ್ಯುತ್ ಮಾರ್ಗದಲ್ಲಿರುವ ಮರಗಿಡಗಳನ್ನು ಕಟಾವು ಮಾಡಲು ಹಾಗು ಕಂಬಗಳನ್ನು ಸಾಗಿಸಲು/ನೆಡಲು ನವೀನ ತಾಂತ್ರಿಕತೆ ಹೊಂದಿರುವ ವಾಹನಗಳನ್ನು ಒದಗಿಸಿ ತುರ್ತು ಸಂಧರ್ಭಗಳಲ್ಲಿ ಸಕಾಲದಲ್ಲಿ ಗ್ರಾಹಕರ ದೂರುಗಳಿಗೆ ಸ್ಪಂಧಿಸುವಂತೆ ಕೋರಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಸಂಬಂಧಪಟ್ಟ ಐಡಿಯಾ ಇನ್ಫಿನಿಟಿ ಸಂಸ್ಥೆಯವರ ಪ್ರತಿನಿಧಿಯವರೊಂದಿಗೆ ಮಾತನಾಡಿ ಮುಂದಿನ ತಿಂಗಳಿನಿಂದ ಸರಿಯಾದ ಸಮಯಕ್ಕೆ ಬಿಲ್ ಒದಗಿಸುವಂತೆ ತಾಕೀತು ಮಾಡಿದರು.<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಮಳೆಗಾಲಕ್ಕೆ ಪ್ರತಿಯೊಂದು ಶಾಖೆಗೆ ವಿದ್ಯುತ್ ಅಡಚಣೆ ನಿಭಾಯಿಸಲು ವಾಹನವನ್ನು ಒದಗಿಸಲು ಟೆಂಡರ್ ಪ್ರಕ್ರಿಯೆ ಮುಗಿದಿದ್ದು ಮುಂದಿನ ದಿನಗಳಲ್ಲಿ ವಾಹನವನ್ನು ಒದಗಿಸುವುದಾಗಿ ತಿಳಿಸಿದರು. |

Scanned by CamScanner

| | | | |
|---|---|---|---|
| 8 | ನಾರಾಯಣ ಮೂರ್ತಿ, ಕೆದಮುಳ್ಳೂರು ದೂ.9480853633 | * ತಮ್ಮ ಗ್ರಾಮದ ಸುತ್ತಮುತ್ತಲಿನ ಪ್ರದೇಶಗಳಿಗೆ ಕೇವಲ 1 25 ಕೆ.ವಿ.ಎ ಪರಿವರ್ತಕವಿದ್ದು ವೋಲ್ಟೇಜ್ ಸಮಸ್ಯೆಯಿದ್ದು ಯಾವುದೇ ವಿದ್ಯುತ್ ಉಪಕರಣಗಳು ಸಮರ್ಪಕ ಬಳಕೆಗೆ ಸಮಸ್ಯೆಯಾಗುತ್ತಿರುವ ಬಗ್ಗೆ.<br><br>* ತಮ್ಮ ಮನೆಯ ಹತ್ತಿರದಲ್ಲಿ ವಿದ್ಯುತ್ ಕಂಬ ಬಾಗಿಕೊಂಡಿದ್ದು ಸರಿಪಡಿಸಬೇಕಾಗಿ ಕೇಳಿಕೊಂಡರು. | * ಇದಕ್ಕೆ ಸಹಾಯಕ ಅಭಿಯಂತರರು (ವಿ) ರವರು ಸದರೀ ಗ್ರಾಮಕ್ಕೆ ದೀನ್ ದಯಾಳು ವಿದ್ಯುತ್ ಯೋಜನೆಯಡಿ ಅತಿ ಶೀಘ್ರದಲ್ಲಿ ಹೊಸ ವಿದ್ಯುತ್ ಪರಿವರ್ತಕವನ್ನು ಅಳವಡಿಸಲಾಗುವುದೆಂದು ತಿಳಿಸಿದರು<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಸರಿಪಡಿಸಿಕೊಡುವಂತೆ ಸೂಚಿಸಿದರು. |
| 9 | ಎಂ.ಜಿ.ಮಾದಯ್ಯ ಹಾಗೂ ಎಂ.ಕೆ.ಬೋಪಣ್ಣ ಕೆದಮುಳ್ಳೂರು, ಪಾಲಂಗಾಲ | * ಪಾಲಂಗಾಲ ಗ್ರಾಮದ ಹಲವು ಕಡೆ ವಿದ್ಯುತ್ ಸಮಸ್ಯೆಯಿದ್ದು ಸದರೀ ಗ್ರಾಮದ ಮುಖ್ಯ ರಸ್ತೆಯಲ್ಲಿ ಮಹೀಂದ್ರ ಕಂಪನಿಗೆ ಹಾದು ಹೋಗಿದ್ದು ಸದರೀ ಮಾರ್ಗದಿಂದ ಹೆಚ್ಚುವರಿ ಪರಿವರ್ತವನ್ನು ಅಳವಡಿಸಿ ವೋಲ್ಟೇಜ್ ಸಮಸ್ಯೆ ಪರಿಹರಿಸಿಕೊಡುವಂತೆ ಕೇಳಿಕೊಂಡರು. ಹಾಗೂ ಹಲವೆಡೆ ವಿದ್ಯುತ್ ಮಾರ್ಗದ ತಂತಿಯು ಜೋತು ಬಿದ್ದಿದ್ದು ಸರಿಪಡಿಸುವಂತೆ ಕೋರಿದರು. | * ಇದಕ್ಕೆ ಉತ್ತರಿಸಿದ ಕಾರ್ಯ ನಿರ್ವಾಹಕ ಅಭಿಯಂತರರು ಮಹೀಂದ್ರ ಕಂಪನಿಗೆ ವಿದ್ಯುತ್ ಉಪಕೇಂದ್ರದಿಂದ ಪ್ರತ್ಯೇಕ ಮಾರ್ಗ ಹೋಗಿದ್ದು ಸದರೀ ಮಾರ್ಗದಲ್ಲಿ ಪರಿವರ್ತಕವನ್ನು ಅಳವಡಿಸಲಾಗುವುದಿಲ್ಲ ಬದಲಾಗಿ ಹಾಲಿಯಿರುವ ಚೇತ್ರಿ ಮಾರ್ಗದಲ್ಲಿ ದೀನ್ ದಯಾಳು ವಿದ್ಯುತ್ ಯೋಜನೆಯಡಿ ಪ್ರತ್ಯೇಕ ಪರಿವರ್ತಕ ಅಳವಡಿಸಲಾಗುವುದಾಗಿ ತಿಳಿಸಿದರು ಮುಂದುವರಿದು ಅಧೀಕ್ಷಕ ಇಂಜಿನಿಯರ್ (ವಿ) ರವರು ಮಾತನಾಡುತ್ತ ಜೋತು ಬಿದ್ದಿರುವ ಮಾರ್ಗದಲ್ಲಿ ಆನೆ ಕಾರಿಡಾರ್ ಯೋಜನೆಯಡಿ ವಿದ್ಯುತ್ ಕಂಬ ಅಳವಡಿಸುವಂತೆ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರಿಗೆ ಸೂಚಿಸಿದರು. |
| 10 | ಕೆ.ಬಿ.ಹೇಮಚಂದ್ರ, ವಕೀಲರು ಹಾಗೂ ಮಾನವ ಹಕ್ಕುಗಳ ಕಾರ್ಯಕರ್ತರು, ಕನಸಿನ ಅರಮನೆ, ಬಾಡಗ ಬಾಣಂಗಾಲ 9448422388 | * ತಮ್ಮ ವಾಸದ ಮನೆಯ ವಿದ್ಯುತ್ ಸ್ಥಾವರ ಸಂಖ್ಯೆ ಎಸ್.ಎ.ಇ.ಎಚ್.389 ಗೆ ಮಾಸಿಕ ಅಧಿಕ ಬಿಲ್ ಬರುತ್ತಿರುವ ಬಗ್ಗೆ ಆಕ್ಷೇಪ ವ್ಯಕ್ತ ಪಡಿಸಿದರು.<br><br>* ಕದನೂರು ಗ್ರಾಮದಲ್ಲಿ ವಿದ್ಯುತ್ ವೋಲ್ಟೇಜ್ ಸಮಸ್ಯೆಯಿರುವುದಾಗಿ ಸರಿಪಡಿಸುವಂತೆ ತಿಳಿಸಿದರು.<br><br>* ಬಾಡಗ ಬಾಣಂಗಾಲ ಗ್ರಾಮದ ಮಠ ಪೈಸಾರಿಗೆ ವಿದ್ಯುತ್ ಮಾರ್ಗವು ಕಾಡು ಪ್ರದೇಶದಿಂದ ಹಾದು ಹೋಗಿದ್ದು ಬಿ.ಬಿ.ಟಿ.ಸಿ ಯೀಂದ ನೇರವಾಗಿ ಮಾರ್ಗ ಎಳೆಯುವ ಬಗ್ಗೆ. | * ಇದಕ್ಕೆ ಉತ್ತರಿಸಿದ ಉಪ ಲೆಕ್ಕ ನಿಯಂತ್ರಣಾಧಿಕಾರಿಯವರು ಸದರೀ ವಿಚಾರವನ್ನು ಸೂಕ್ತ ರೀತಿಯಲ್ಲಿ ಪರಿಶೀಲಿಸುವಂತೆ ಹಾಗೂ ಮಾಪಕ ಓದುಗರನ್ನು ಕರೆಸಿ ಸೂಕ್ತ ಮಾರ್ಗದರ್ಶನ ನೀಡುವಂತೆ ಹಿರಿಯ ಸಹಾಯಕರಿಗೆ ಸೂಚಿಸಿದರು.<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 11 | ಕೆ.ಎಸ್.ಬೋಪಯ್ಯ ಹಾಗೂ ಸಿ.ಎ.ಅಬ್ದುಲ್ಲಾ(ಸಾರ್ವಜನಿಕ ಹಿತ ರಕ್ಷಣಾ ಸಮಿತಿ) 9448194837 | * ವಿರಾಜಪೇಟೆ ಪಟ್ಟಣಕ್ಕೆ ಹಾಲಿ ಪಿರಿಪಟ್ಟಣದಿಂದ ಸರಬರಾಜಾಗುತ್ತಿರುವ 66 ಕೆ.ವಿ ಮಾರ್ಗದಲ್ಲಿ ಮಳೆಗಾಲದ ಸಂಧರ್ಭದಲ್ಲಿ ಆಗುವ ಅಡಚಣೆಯನ್ನು ಸರಿಪಡಿಸುವ ಸಂಧರ್ಭ ಪರ್ಯಾಯ ಮಾರ್ಗವಾಗಿ ಮಡಿಕೇರಿಯಿಂದ 66 ಕೆ.ವಿ ಮಾರ್ಗವನ್ನು ವಿರಾಜಪೇಟೆಯವರಗೆ ಅಳವಡಿಸುವಂತೆ ಲಿಖಿತ ರೂಪದಲ್ಲಿ ತಿಳಿಸಿರುತ್ತಾರೆ. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಸಂಬಂಧಪಟ್ಟ ವಿಚಾರವನ್ನು ಕೆ.ಪಿ.ಟಿ.ಸಿ.ಎಲ್ ನ ಮೇಲಧಿಕಾರಿಗಳೊಂದಿಗೆ ಪತ್ರ ವ್ಯವಹರಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದಾಗಿ ತಿಳಿಸಿದರು. |

Scanned by CamScanner

| | | | |
|---|---|---|---|
| 12 | ಅನುಪಮ್ ರೇ, ನಾಂಗಾಲ ಗ್ರಾಮ 9448477255 | * ನಾಂಗಾಲ ಗ್ರಾಮದಲ್ಲಿ ವಿದ್ಯುತ್ ಅಡಚಣೆಯು ತೀವ್ರವಾಗಿದ್ದು ಹಾಗೂ ವೋಲ್ಟೇಜ್ ಸಮಸ್ಯೆಯಿದ್ದು ಸೂಕ್ತ ರೀತಿಯಲ್ಲಿ ಕ್ರಮ ಕೈಗೊಳ್ಳುವಂತೆ ತಿಳಿಸಿದರು. | * ಸ.ಕಾನಿ.ಇಂ(ವಿ) ಮಾತನಾಡುತ್ತ ಸದರೀ ಗ್ರಾಮಕ್ಕೆ 11 ಕೆ.ವಿ ಬಿ.ಶೆಟ್ಟಿಗೇರಿ ಮಾರ್ಗದಿಂದ ವಿದ್ಯುತ್ ಸರಬರಾಜಗುತ್ತಿದ್ದು ಹೆಗ್ಗಳ/ಬಿ.ಶೆಟ್ಟಿಗೇರಿ ಗ್ರಾಮಕ್ಕೆ ಪ್ರತ್ಯೇಕ ಮಾರ್ಗವನ್ನು ಅಳವಡಿಸುವ ಕಾಮಗಾರಿಯು ಐಪಿಡಿಎಸ್ ಯೋಜನೆಯಡಿ ಕೈಗೊಂಡಿದ್ದು ಸದರೀ ಕಾಮಗಾರಿಗೆ ಬ್ರೇಕರ್ ಅಳವಡಿಸಿದ ನಂತರ ವಿದ್ಯುತ್ ಅಡಚಣೆಯು ಕಮ್ಮಿಯಾಗುವುದಾಗಿ ತಿಳಿಸಿದರು. ಮುಂದುವರಿದು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ವೋಲ್ಟೇಜ್ ಬಗೆಹರಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 13 | ಪೌಲ್ ಸಿಕ್ವೇರಿಯಾ, ಚರ್ಚ್ ಬೀದಿ, ವಿರಾಜಪೇಟೆ 944891385 | * ಚರ್ಚ್ ಬೀದಿಯಲ್ಲಿ 11 ಕೆ.ವಿ ವಿದ್ಯುತ್ ಮಾರ್ಗದ ಕೆಳಗಡೆ ಅರಳಿಮರವಿದ್ದು ಸದರೀ ಮರದಿಂದ ವಿದ್ಯುತ್ ಮಾರ್ಗಕ್ಕೆ ತಗಲುವ ರೆಂಬೆ ಕೊಂಬೆಗಳು ಹಾಗೂ ಪರಾವಲಂಬಿ ಸಸ್ಯವನ್ನು ಕಟಾವು ಮಾಡುವಂತೆ ತಿಳಿಸಿದರು.<br>* ಮಳೆಗಾಲದ ಸಂಧರ್ಭದಲ್ಲಿ ಗುಡುಗು ಮಿಂಚಿನಿಂದ ಶಾಖೆಯ ಸ್ಥಿರ ದೂರವಾಣಿಯು ಸ್ಥಗಿತಗೊಳ್ಳುವುದರಿಂದ ಪರ್ಯಾಯ ವ್ಯವಸ್ಥೆ ಮಾಡುವಂತೆ ತಿಳಿಸಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಸಂಬಂಧಪಟ್ಟ ಪಟ್ಟಣ ಪಂಚಾಯ್ತಿಗೆ ಮಾತನಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ರವರಿಗೆ ಸೂಚಿಸಿದರು.<br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಪ್ರತ್ಯೇಕ ಮೊಬೈಲ್ ದೂರವಾಣಿ ಒದಗಿಸುವಂತೆ ಕೋರಿಕೆ ಪತ್ರವನ್ನು ಸಲ್ಲಿಸಲು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |
| 14 | ಬಿ.ಕೆ.ಮಂದಪ್ಪ, ಗಾಂಧಿನಗರ 9449359293 | * ಗಾಂಧಿನಗರದ ಸುತ್ತಮುತ್ತಲಿನಲ್ಲಿ ವಿದ್ಯುತ್ ಕಂಬವನ್ನು ಸೂಕ್ತ ರೀತಿಯಲ್ಲಿ ಅಳವಡಿಸದೇ ಇರುವ ಬಗ್ಗೆ ಹಾಗೂ ಕಂಬದ ಬುಡಕ್ಕೆ ಕಂಬವು ವಾಲದಂತೆ ಸೀಮೆಂಟ್ ಕಾಂಕ್ರೀಟ್ ಹಾಕುವಂತೆ ತಿಳಿಸಿದರು ಹಾಗೂ ಒಂದು ಕಡೆ ಕಂಬ ಅಳವಡಿಸಲು ಗುಂಡಿ ತೋಡಿ ಕಂಬ ಅಳವಡಿಸದೇ ಇರುವ ಬಗ್ಗೆ ದೂರಿದರು. | * ಸ.ಕಾನಿ.ಇಂ(ವಿ) ಮಾತನಾಡುತ್ತ ವಿದ್ಯುತ್ ಕಂಬದ ಬುಡಕ್ಕೆ ಸೀಮೆಂಟ್ ಕಾಂಕ್ರೀಟ್ ಹಾಕಿದರೆ ಗಾಂಧಿನಗರದ ವ್ಯಾಪ್ತಿಯಲ್ಲಿ ಮರಗಿಡಗಳಿದ್ದು ಅವುಗಳು ಬಿದ್ದ ಸಂಧರ್ಭದಲ್ಲಿ ಕಂಬಗಳು ಮುರಿಯುವ ಸಾಧ್ಯತೆ ಹೆಚ್ಚಾಗುವುದಾಗಿ ತಿಳಿಸಿದರು ಹಾಗೂ ವಾಲಿರುವ ಕಂಬಗಳನ್ನು ಕೂಡಲೇ ಸರಿಪಡಿಸುವುದಾಗಿ ತಿಳಿಸಿದರು. |
| 15 | ಅಚ್ಚಪ್ಪ, ಬೇಟೋಳಿ . ಗುಂಡಿಗೆರೆ 9480904811 | * ಗುಂಡಿಗೆರೆ ಗ್ರಾಮದ ಹಲವೆಡೆ ವೋಲ್ಟೇಜ್ ಸಮಸ್ಯೆಯಿರುವುದಾಗಿ ತಿಳಿಸಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 16 | ಸಿ.ಎಂ.ಕಾಶಿ, ಮಗ್ಗುಲ ಗ್ರಾಮ, ಐಮಂಗಲ 9482943899 | * ತಮ್ಮ ಮನೆಯ ಪಕ್ಕದಲ್ಲಿರುವ ವಿದ್ಯುತ್ ಕಂಬವು ಬೀಳುವ ಸ್ಥಿತಿಯಲ್ಲಿದ್ದು ಸರಿಪಡಿಸುವಂತೆ ಲಿಖಿತ ರೂಪದಲ್ಲಿ ತಿಳಿಸಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 17 | ಟಿ.ಕೆ.ಜೇಜಿ, ರಾಮನಗರ ಗುಂಡಿಕಗೆರೆ 9481951015 | * ಗುಂಡಿಗೆರೆ ಗ್ರಾಮದ ಹಲವೆಡೆ ವೋಲ್ಟೇಜ್ ಸಮಸ್ಯೆಯಿರುವುದಾಗಿ ತಿಳಿಸಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |

Scanned by CamScanner

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಆದ ಶ್ರೀ.ಸುರೇಶ್‌ರವರು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಎಲ್ಲಾ ಸದಸ್ಯರ ಸಹಕಾರ ಕೋರಲಾಯಿತು ಹಾಗು ನಿಗಮದ ವತಿಯಿಂದ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು

<u>ಪ್ರತಿಯನ್ನು:</u>

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ವಿರಾಜಪೇಟೆ ಉಪವಿಭಾಗ ರವರ ಮಾಹಿತಿಗಾಗಿ.
7. ಹಿಆಸ/ಪ್ರಕ/ಕಡತ.

Scanned by CamScanner